# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಆ.ವಿ./ನಗರಸಭಾ ನಿಧಿ/ಟೆಂಡರು/ಫಾ.ಯಂ.ಖ./ವಿವ- /2009-10 ದಿನಾಂಕ:-11.11.2009

## ಅಲ್ಪಾವಧಿ ಟೆಂಡರು ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ-2000 ರಂತೆ ಶಿರಸಿ ನಗರಸಭೆ ವ್ಯಾಪ್ತಿಯಲ್ಲಿ ಚಿಕೂನ್ ಗುನ್ಯ ಮತ್ತು ಡೆಂಗ್ಯೂ ಜ್ವರದ ನಿಯಂತ್ರಣದ ಸಲುವಾಗಿ ದೂಮೀಕರಣ ಮಾಡಬೇಕಾದ ಕಾರಣ ಈ ಕೆಳಗೆ ತೋರಿಸಿದ ಅಳತೆಯ ಧೂಮೀಕರಣ ಯಂತ್ರ ಬೇಕಾಗಿರುತ್ತದೆ. ವಿವರಣೆ ಈ ಕೆಳಗಿನಂತಿರುತ್ತದೆ.

| ಅ.ನಂ. | ವಿವರ | ಸಂಖ್ಯೆ | ಇ.ಎಮ್.ಡಿ. (ರೂ.) |
|---|---|---|---|
| 1 | Vehicle mountable fogging machine with remote control operation.<br>Type-Thermal aerosol-fog. Petroleum based electric start output-3000 m 3. For per minute.<br>Engine performance-44 H.P./hr. Fuel consumption 2.3 Ltr./Hr.<br>Weight: 18.6 kg. (empty). Fuel tank capacity-12 ltr.<br>Formulation tank capacity-200 Ltr. Drum attachment kit. | 1 | 5,000/- |
| 2 | Space Spraying Equipment<br>Make S.S. Fog.<br>Model: 150 AT. Type: Thermal Fogging. | 1 | 2,000/- |

ಸದರಿ ಧೂಮೀಕರಣ ಯಂತ್ರವನ್ನು ಪೂರೈಸಲು ಇಚ್ಛೆಯಿದ್ದ ಅಧಿಕೃತ ಪೂರೈಕೆದಾರರು ಈ ಕೆಳಗಿನ ಷರತ್ತುಗಳಿಗೊಳಪಟ್ಟು ದರವಾರುಗಳನ್ನು ಸಲ್ಲಿಸುವುದು.

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 25.11.2009 (11:00 ಘಂಟೆಯವರೆಗೆ)
2. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 25.11.2009 (ಸಂಜೆ 4:30 ಗಂಟೆವರೆಗೆ)
3. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ತೆರೆಯುವ ದಿನಾಂಕ : 26.11.2009 (ಸಂಜೆ 5:00 ಗಂಟೆಗೆ)

ವಿಧಿಸಲಾಗಿರುವ ಪೂರ್ವ ಶರತ್ತುಗಳು:-

1. ದರವಾರಿನ ಜೊತೆಗೆ ಇ.ಎಮ್.ಡಿ. ರಕಂನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಯನ್ನು ಪೌರಾಯುಕ್ತರು, ನಗರಸಭೆ, ಶಿರಸಿರವರ ಹೆಸರಿಗೆ ತೆಗೆದು ಲಗ್ತಿಸುವುದು.
2. ಇಲೆಕ್ಟ್ರಿಕಲ್ ಸ್ಟಾರ್ಟ ಮಶೀನ್ ಇರುವುದು.
3. ಪೂರೈಕೆ ಆದೇಶ ನೀಡಿದ ಮೂರು ದಿನದೊಳಗಾಗಿ ಯಂತ್ರಗಳನ್ನು ಪೂರೈಸುವುದು.
4. ಟೆಂಡರಿನಲ್ಲಿ ಭಾಗವಹಿಸುವ ಪೂರೈಕೆದಾರರು ಅಧಿಕೃತ ಮಾರಾಟ/ಹಂಚಿಕೆ ಪ್ರಮಾಣ ಪತ್ರ ಹೊಂದಿರತಕ್ಕದ್ದು ಮತ್ತು ಪ್ರಮಾಣ ಪತ್ರದ ಝೆರಾಕ್ಸ್ ಪ್ರತಿಯನ್ನು ಲಗತ್ತಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರ ಟೆಂಡರನ್ನು ಪರಿಗಣಿಸುವುದಿಲ್ಲ.
5. ಧೂಮೀಕರಣ ಯಂತ್ರಗಳನ್ನು ಪೂರೈಸಿದ ಎರಡು ವರ್ಷದ ಅವಧಿಗೆ ದುರಸ್ತಿ ಮಾಡಿಕೊಡುವ ಕರಾರಿನೊಂದಿಗೆ ಪೂರೈಕೆ ಆದೇಶ ನೀಡಲಾಗುವುದು.
6. ಪೂರೈಕೆದಾರರು ನಮೂದಿಸುವ ದರಗಳು ಸಾಗಾಣಿಕೆ ವೆಚ್ಚ ಮತ್ತು ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು.
7. ಟೆಂಡರು ಫಾರ್ಮಿನ ಪ್ರತಿ ಪುಟದಲ್ಲಿ ಪೂರೈಕೆದಾರರು ಸಹಿ ಮಾಡಿರತಕ್ಕದ್ದು.
8. ಪೂರೈಕೆದಾರರು ಪೂರೈಸುವ ಯಂತ್ರಗಳು ಟೆಂಡರಿನಲ್ಲಿ ಸೂಚಿಸಿದ Technical Specification ಮತ್ತು ಗುಣಮಟ್ಟದಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಆದೇಶವನ್ನು ರದ್ದುಗೊಳಿಸಿ ಇ.ಎಮ್.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಅಧ್ಯಕ್ಷರು,
ನಗರಸಭೆ, ಶಿರಸಿ.

ಪೌರಾಯುಕ್ತರು,
ನಗರಸಭೆ, ಶಿರಸಿ.